ಈ ರಸ್ತೆಯು ಜಿಲ್ಲಾ ಪರಿಷತ್ತಿನ ವ್ಯಾಪ್ತಿಯಲ್ಲಿ ಬರುತ್ತದೆ. ಈ ರಸ್ತೆಯನ್ನು ದುರಸ್ತಿಯಲ್ಲಿಟ್ಟು ಸುಗಮ ಸಂಚಾರಕ್ಕೆ ಅನುವು ಮಾಡಿಕೊಡುವಂತೆ ಜಿಲ್ಲಾ ಪರಿಷತ್ತಿನವರಿಗೆ ಸೂಚಿಸಲಾಗುವುದು.

ಅಧ್ಯಕ್ಷರು.—ತಾವುಗಳು ದಯವಿಟ್ಟು ಬರೆದು ಕಳುಹಿಸಿಕೊಡಿ. ನಿಯಮಗಳ ಪ್ರಕಾರ ಈಗ ತಮಗೆ ನಾನು ಅವಕಾಶವನ್ನು ಕೊಡುವುದಿಲ್ಲ. ಪ್ರಸ್ತಾಪ ಮಾಡುವ ವಿಚಾರದ ಬಗ್ಗೆ ತಾವುಗಳು ಬರೆದು ಕೊಡಬೇಕು. ನಿಯಮಾವಳಿಗಳ ಪ್ರಕಾರ ಈ ಸದನದಲ್ಲಿ ವಿಷಯವನ್ನು ಪ್ರಸ್ತಾಪ ಮಾಡ ಬೇಕಾದರೆ ಪೂರ್ವಬಾವಿಯಾಗಿ ನನಗೆ ಬರೆದು ಕಳುಹಿಸಬೇಕು. ಹಾಗೆ ನಿಯಮವನ್ನು ಅನುಸರಿಸದಿದ್ದರೆ ನಾನು ಅದಕ್ಕೆ ಅವಕಾಶ ಮಾಡಿಕೊಡುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್.—ಈವೊತ್ತಿನ ದಿವಸ ನಾವುಗಳು ತಮ್ಮಲ್ಲಿ ಅರಿಕೆ ಮಾಡಿಕೊಳ್ಳಿತ್ತಿದ್ದೇವೆ. ಇನ್ನು ಮೇಲೆ ತಾವುಗಳು ಅಪ್ಪಣೆ ಕೊಡಿಸಿದ ಪ್ರಕಾರ ನಿಯಮಾವಳಿಗಳನ್ನು ಅನುಸರಿಸುತ್ತೇವೆ. ದಯವಾಡಿ ಕೋಪಿಸಿಕೊಳ್ಳಬೇಡಿ...

ಅಧ್ಯಕ್ಷರು.—ಸಚಿವ ಸಂಪುಟ್ಟಕ್ಕೆ ಜಂಟಿ ಜವಾಬ್ದಾರಿ ಇರುತ್ತದೆ. ಒಬ್ಬರ ಕರ್ತವ್ಯವನ್ನು ಅವರ ಗೈರು ಹಾಜರಿಯಲ್ಲಿ ನಿರ್ವಹಿಸಿದವರು ಮಾಡಬಹುದು.....

ಶ್ರೀ ವಾಟಾಳ್ ನಾಗರಾಜ್.—ಯಾರು ಅವರ ಕೆಲಸವನ್ನು ನಿರ್ವಹಿಸುತ್ತಾರೆ ಎಂದು ಹೇಳು ಬಹುದಲ್ಲ? ...

(ಗೊಂದಲ)

ಅಧ್ಯಕ್ಷರು.—ದಯವಿಟ್ಟು ಒಬ್ಬೊಬ್ಬರೇ ಮಾತನಾಡಿ.....

ಶ್ರೀ ವೆಂಕಟೇಶ್.—ಅಧ್ಯಕ್ಷರೆ.....

MR. SPEAKER —Mr. Venkatesh. I will have to seriously warn you The Deputy Leader of Opposition...

ಶ್ರೀ ಪಿ. ಜಿ. ಆರ್. ಸಿಂಧ್ಯ.—ಸದನದಲ್ಲಿ ಯಾವುದೇ ವಿಚಾರವನ್ನು ಪ್ರಸ್ತಾಪ ಮಾಡಬೇಕಾದರೆ ಅದನ್ನು ಬರವಣಿಗೆಯ ಮೂಲಕ ಅಥವಾ ಯಾವುದಾದರೂ ಒಂದು ರೂಪದಲ್ಲಿ ತಮ್ಮ ಗಮನಕ್ಕೆ ತರ ಬೇಕು ಅಥವಾ ಪೂರ್ವಭಾವಿಯಾಗಿ ನಿಯಮಗಳ ಚೌಕಟ್ಟಿನಲ್ಲಿ ತಿಳಿಸಿ ಅನಂತರ ಚರ್ಚೆ ಮಾಡಬೇಕೆಂದು ಹೇಳಿದ್ದೀರಿ. ಆ ಬಗ್ಗೆ ನಪ್ಪಿ ಕಡೆಯಿಂದ ಎರಡು ಮಾತಿಲ್ಲ.

MR.—SPEAKAER.—Thank you.

ಶ್ರೀ ಪಿ. ಜಿ. ಆರ್. ಸಿಂಧ್ಯ.—ತಾವುಗಳು ಅನೇಕ ಸಂದರ್ಭಗಳಲ್ಲಿ ನಮ್ಮ ಎಲ್ಲಾ ಸದಸ್ಯರುಗಳ ಬಗ್ಗೆ ಔದಾರ್ಯವನ್ನು ತೋರಿಸಿದ್ದೀರಿ. ಚರ್ಚೆ ಮಾಡಲು ಅವಕಾಶವನ್ನು ಕೊಟ್ಟಿದ್ದೀರಿ. ಕೆಲವೊಮ್ಮೆ ಜನರ ಹಿತದೃಷ್ಟಿಯಿಂದ ನಿಯಮಾವಳಿಗಳನ್ನು ಬಿಟ್ಟು ಕೂಡ ಚರ್ಚೆ ಮಾಡಬೇಕಾದ ಸಂದರ್ಭಗಳು ಬರುತ್ತವೆ. ಅಂಥ ಸಂದರ್ಭಗಳಲ್ಲಿ ಕೂಡ ಸದನದ ಗೌರವವನ್ನು ಎತ್ತಿ ಹಿಡಿಯುವ ದೃಷ್ಟಿಯಿಂದ ಔದಾರ್ಯವನ್ನು ತೋರಿಸಿದ್ದೀರಿ. ಇವೊತ್ತು ಕೂಡ ನಮಗೆ ಸಾಕಷ್ಟು ಅವಕಾಶವನ್ನು ಕೊಟ್ಟಿದ್ದೀರಿ. ಆದರೆ ಇವೊತ್ತು ಮಾನ್ಯ ವಾಟಾಳ್ ನಾಗರಾಜ್ ಮತ್ತು ಇತರರು ಎತ್ತಿರತಕ್ಕಂಥ ವಿಚಾರ ಏನೆಂದರೆ, ತಾವುಗಳು ಹೇಳಿದಂತೆ ಇಲ್ಲಿ ಸದನದಲ್ಲಿ ಎಲ್ಲಾ ಪ್ರಮುಖ ಮಂತ್ರಿಗಳು ಇದ್ದಾರೆ. ಮಾನ್ಯ ಸಚಿವರಾದ ಶಿವಣ್ಣನವರು ವಿದೇಶಕ್ಕೆ ಹೋಗಿದ್ದಾರೆ. ಸದನ ನಡೆಯುತಕ್ಕಂಥ ಸಂದರ್ಭದಲ್ಲಿ ಸಾಮಾನ್ಯವಾಗಿ ಯಾವುದೇ ಸದನದ ಸದಸ್ಯರು ಡೆಲ್ಲಿಗೆ ಹೋದರೂ ಕೂಡ ಸದನಕ್ಕೆ ತಿಳಿಸುತ್ತಾರೆ, ವಿದೇಶಕ್ಕೆ ಹೋದರೂ ಕೂಡ ಅಧ್ಯಕ್ಷರಿಗೆ ತಿಳಿಸುತ್ತಾರೆ, ಅಪ್ಪಣೆ ಪಡೆದುಕೊಳ್ಳುತ್ತಾರೆ. ತಾವೂ ಕೂಡ ಸದನದ ಒಪ್ಪಿಗೆ ಪಡೆದು ವಿದೇಶಕ್ಕೆ ಹೋಗುತ್ತೀರಿ. You are the custodian of the House. ಇದೊಂದು ಸತ್‌ಸಂಪ್ರದಾಯ ಈ ಗೌರವಾನ್ವಿತ ಮನೆಯಲ್ಲಿ ನಡೆದುಕೊಂಡು ಬಂದಿರತಕ್ಕಂಥ ಸಂಪ್ರದಾಯವಾಗಿದೆ ಸದಸ್ಯರ ಕಾತುರತೆ ಈ ವಿಚಾರದಲ್ಲಿ ಏಕೆ ಅಂದರೆ, ಗಣಿ ಮತ್ತು ಭೂ ವಿಜ್ಞಾನ ಖಾತೆಯ ಚರ್ಚೆ ಮತ್ತು ಉತ್ತರ ಮುಂಗಿದ ಕೂಡಲೇ ಸಚಿವರು ತತ್‌ಕ್ಷಣವೇ ಮಾಯವಾಗಿದ್ದಾರೆ. ಇದಕ್ಕೆ ಏನು ಕಾರಣ ಇರಬಹುದು ಎಂಬುದು ಅವರ ಕಾತುರಕ್ಕೆ ಕಾರಣವಾಗಿದೆ. ಆದುದರಿಂದ ಸರಕಾರದವರು ಇದನ್ನು ತಿಳಿಸಬೇಕು ಸಚಿವರು ಖಾಸಗೀ ಕೆಲಸದ ಮೇಲೆ ಹೋಗಿದ್ದಾರೋ ಅಥವಾ ಸರಕಾರದ ಕೆಲಸದ ಮೇಲೆ ಹೋಗಿದ್ದಾರೋ ಎಂದು ತಿಳಿಸಬೇಕು. ಈ ಬಗ್ಗೆ ತಿಳಿದುಕೊಳ್ಳಲು ಎಲ್ಲಾ ಮಾನ್ಯ ಸದಸ್ಯರು ಬಯಸಿದ್ದಾರೆ. ಹೀಗಾಗಿ ಅದನ್ನು ತಿಳಿದುಕೊಳ್ಳಬೇಕೆನ್ನುವ ದೃಷ್ಟಿಯಿಂದ ತಮ್ಮ ಗಮನಕ್ಕೆ ತರುತ್ತಿದ್ದಾರೆ.

ಅಧ್ಯಕ್ಷರು.—ನಾನು ಈ ಸದನವನ್ನು ನಡೆಸತಕ್ಕಂಥ ಕಾಲದಲ್ಲಿ ಮಾನ್ಯ ಸದಸ್ಯರುಗಳು ಯಾವುದೇ ವಿಚಾರವನ್ನು ಪ್ರಸ್ತಾಪ ಮಾಡತಕ್ಕಂಥ ಅಗತ್ಯ ಮತ್ತು ಔಚಿತ್ಯ ಕಂಡು ಬಂದಲ್ಲಿ ಪೂರ್ವಬಾವಿಯಾಗಿ ನನ್ನನ್ನು ನೋಡುವುದಕ್ಕೆ ಸಾಧ್ಯವಾಗಲಿಲ್ಲ ಅಂದರೆ ಒಂದು ಪೇಪರ್‌ನಲ್ಲಿ ಇಂಥ ವಿಚಾರವನ್ನು ನಾನು ಸದನದಲ್ಲಿ ಪ್ರಸ್ತಾಪ ಮಾಡಬಯಸಿದ್ದೇನೆ ಅವಕಾಶ ಮಾಡಿಕೊಡಿ ಎಂದು ಬರೆದು ಕೊಡಬಹುದು. ಇಲ್ಲದಿದ್ದರೆ ನಾನು ಸದನಕ್ಕೆ ಬರುವಾಗ ಇಂಥ ವಿಚಾರವನ್ನು ನಾನು ಪ್ರಸ್ತಾಪ ಮಾಡುತ್ತೇನೆ, ಎಂದು ಹೇಳತಕ್ಕಂಥಾದ್ದು ನನ್ನ ತಿಳುವಳಿಕೆಗೆ ತರತಕ್ಕಂಥ ಒಂದು ಸಂಪ್ರದಾಯವನ್ನು ಪಾಲಿಸಬೇಕು. ಇದನ್ನು ತಾವುಗಳು ತಪ್ಪು ಎಂದು ಅಭಿಪ್ರಾಯ ಪಟ್ಟರೆ ಆದಕ್ಕೆ ನಾನು ತಯಾರಾಗಿದ್ದೇನೆ.

ಶ್ರೀ ವಾಟಾಳ್ ನಾಗರಾಜ್.—ಅಪ್ಪಣೆ ಸ್ವಾಮಿ, ತಮ್ಮ ಆದೇಶವನ್ನು ಖಂಡಿತಾ ಅನುಸರಿಸುತ್ತೇವೆ. ತಾವುಗಳು ಹೇಳಿದ ಹಾಗೆ ಬರೆದುಕಳುಹಿಸುತ್ತೇವೆ. ತಮ್ಮ ಸೂಚನೆಯನ್ನು ನಾವೆಲ್ಲರೂ ಒಪ್ಪಿದ್ದೇವೆ. ನಾಳೆಯಿಂದ ಇಂಥ ವಿಚಾರಗಳಿದ್ದಲ್ಲಿ ತಮ್ಮ ಗಮನಕ್ಕೆ ತರುತ್ತೇವೆ. ಆದರೆ ಈ ಪ್ರಮುಖವಿವಾದಂಥ ವಿಚಾರಕ್ಕೆ ಮಾತನಾಡಲು ಸ್ವಲ್ಪ ಅವಕಾಶ ಮಾಡಿಕೊಡಿ.

ಅಧ್ಯಕ್ಷರು.—ನೀವು ಏನು ಮಾಡಬೇಕಾದರೂ ಆದನ್ನು ನನ್ನ ತಲೆಗೆ ಕಟ್ಟತಕ್ಕಂಥ ಒಂದು ಭಾರವನ್ನು ವಹಿಸಿದರೆ ಅದು ನನ್ನ ಕೈಯಲ್ಲಿ ಆಗುವುದಿಲ್ಲ. ಸದನದ ಒಳಗೆ ಸೀಮಿತವಾದಂಥ ಜವಾಬ್ದಾರಿಯನ್ನು ನನ್ನ ಕೊರಳಿಗೆ ಕಟ್ಟಿ.

ಶ್ರೀ ಎಂ. ಮಹದೇವ್.—ಸಚಿವರು ವಿದೇಶಕ್ಕೆ ಹೋಗುವುದು ಒಂದು ಮಾಮೂಲಿನ ವಿಚಾರ ಎಂದು ಅವರು ಭಾವಿಸಿದ್ದಾರೋ?

ಶ್ರೀ ಬೈರೇಗೌಡ.—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ವೆಂಕಟೇಶ್‌ರವರು ಮಾನ್ಯ ಸಚಿವರಾದ ಶಿವಣ್ಣನವರ ವಿಚಾರದಲ್ಲಿ ಒಂದು ವಿಚಾರವನ್ನು ತಮ್ಮ ಗಮನಕ್ಕೆ ತರುವುದಕ್ಕೆ ಬಂದರು. ತಾವು ಪ್ರಶ್ನೋತ್ತರ ವೇಳೆಯಲ್ಲಿ ಆ ಭಾಗದಲ್ಲಿ ೨೦–೩೦ ಜನ ಮಾನ್ಯ ಸದಸ್ಯರು ಎದ್ದು ನಿಂತಾಗ.....

ಶ್ರೀ ಎಂ. ಮಹದೇವ್.—ನೀವು ಎದ್ದು ನಿಲ್ಲುವುದಿಲ್ಲವೆ?.....

MR. SPEAKER.—Mr. Mahadev, please resume.

SRI K. H. PATIL.—I am on a point of order. The way in which the hon Member Shri Byre Gowda is referring, he is charging the Speaker with discriminating treatment. He should not be permitted to do that.

SRI C. BYREGOWDA.—Before I could conclude, the Hon. Minister comes to the decision that I am charging the Chair. I have not concluded yet.

MR. SPEAKER.—Let us hear the previous speaker.

ಶ್ರೀ ಕೆ. ಹೆಚ್. ರಂಗನಾಥ್.—ಮಾನ್ಯ ಸದಸ್ಯರು ಬೇಡಿಕೆ ಹಾಕಿದರು. ಅದರಲ್ಲಿ ಮೊದಲನೇ ಶಬ್ದದಲ್ಲಿ ಆ ಕಡೆಯಲ್ಲಿ ೨೦–೩೦ ಜನ ಸದಸ್ಯರು ಎದ್ದು ನಿಂತು .. ಅಂದರೆ ಅದು ಆಪಾದನೆ ಮಾಡುವುದಕ್ಕೆ ಪ್ರಯತ್ನಪಡತಕ್ಕಂಥದ್ದು ಆಗುವುದಿಲ್ಲವೆ? It is a reflection.

ಶ್ರೀ ವಾಟಾಳ್ ನಾಗರಾಜ್.—ಅವರು ಆಪಾದನೆ ಮಾಡಿಲ್ಲ. ಮಾಡುವುದಕ್ಕೆ ಮುಂಚೆ ಊಹೆ ಬೇಡ. ಸಚಿವರು ಸರಕಾರದ ಅಧಿತ್ಯದಲ್ಲಿ ವಿದೇಶಕ್ಕೆ ಹೋಗಿದ್ದಾರೋ ಅಥವಾ ಖಾಸಗಿಯಾಗಿಯೋ? ಎಂಬ ಬಗ್ಗೆ ಕೇಳಿದ್ದೇವೆ.....

(ಗೊಂದಲ)

ಶ್ರೀ ಸಿ. ಬೈರೇಗೌಡ —ಮಾನ್ಯ ಸದಸ್ಯರು ಹೊಸದಾಗಿ ಬಂದ ಯುವಕರು. ವಿಷಯಗಳ ಚರ್ಚೆ ಬಂದಾಗ ಸ್ವಲ್ಪ ಆತುರದಲ್ಲಿ ನಿಲ್ಲುತ್ತಾರೆ. ತಾವುಗಳು ಅದನ್ನು ಗಮನಿಸಿದ್ದೀರಿ. ಮುಂದೆ ಹಾಗೆ ನಡೆದುಕೊಳ್ಳಬಾರದು ಎಂದು ಆದೇಶಿಸಿ. ಹಾಗೆ ನಡೆದುಕೊಳ್ಳುತ್ತಾರೆ. ಅಷ್ಟೇ ಹೊರತಾಗಿ ಅವರು ತಮ್ಮ ಅಧಿಕಾರವನ್ನು ಪ್ರಶ್ನೆ ಮಾಡುವಂಥಾದ್ದಾಗಲಿ, ತಮ್ಮ ವ್ಯಾಪ್ತಿಯನ್ನು ಪ್ರಶ್ನೆ ಮಾಡುವುದಕ್ಕಾಗಲಿ ಎದ್ದು ನಿಂತಿಲ್ಲ.

ಮಾನ್ಯ ಹಿರಿಯ ಸದಸ್ಯರು ಹಾಗೂ ಮಾನ್ಯ ಸಚಿವರಾದ ಶ್ರೀ ಕೆ. ಹೆಚ್. ಪಾಟೀಲ್‌ರವರು ನಾನು ಮಾತನಾಡುವುದಕ್ಕೆ ಎದ್ದು ನಿಂತ ಕೂಡಲೇ ನಾನು ಏನು ಮಾತನಾಡುತ್ತೇನೆ ಎಂಬುದನ್ನು ಊಹಿಸಿ ಹೀಗೆ ಹೇಳಿದರೆ ಹೇಗೆ? ನಮ್ಮಂಥ ಕಿರಿಯ ಸದಸ್ಯರ ಗತಿ ಏನು ಸ್ವಾಮಿ? ಮಾನ್ಯ ವೆಂಕಟೇಶ್‌ರವರು ತಮ್ಮ ಅಪ್ಪಣೆ ಇಲ್ಲದೇ ಎದ್ದು ನಿಂತಾಗ ತಾವುಗಳು ಸಹಾನುಭೂತಿಯಿಂದ ಕಾಣಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ತಾವುಗಳು ಹೇಳಿದ ವಿಚಾರಗಳನ್ನು ನಾನು ಗಮನಿಸಿದ್ದೇನೆ. ಮಾನ್ಯ ವೆಂಕಟೇಶ್‌ರವರು ಹೊಸ ಸದಸ್ಯರು ಮತ್ತು ಬಿಸಿರಕ್ತದ ಯುವಕರು. ಅವರ ತಂದೆಯವರು ನನ್ನ ಪರಿಚಯದವರು ನನ್ನ ಜೊತೆಯಲ್ಲಿ ಈ ಸದನದಲ್ಲಿ ಇದ್ದವರು, ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಹೇಳುವುದಾದರೆ ನಾನು ಅವರ ತಂದೆಯವರನ್ನು ಇಲ್ಲಿ ಡೆಪ್ಯುಟಿ ಸ್ಪೀಕರ್ ಆಗಬೇಕೆಂದು ಸೂಚಿಸಿದ್ದವರ ಪೈಕಿಯಲ್ಲಿ ಒಬ್ಬನು. ನನಗೆ ಅವರ ಮೇಲೆ ಅಭಿಮಾನ ಇದೆ. ಆ ಒಂದು ಸಲಿಗೆ ಇಂದ ಅವರ ತಂದೆಯವರ ಹತ್ತಿರ ಪಾರ್ಲಿಮೆಂಟರಿ ನೀತಿನಿಯಮಗಳ ಬಗ್ಗೆ ತಿಳಿದುಕೊಂಡು ಪರ್ತಿಸಿರಿ ಎಂದು ಹೇಳುತ್ತಿದ್ದೇನೆ.

ಮಾನ್ಯ ಸಚಿವ ಶಿವಣ್ಣನವರು ಸಲ್ಲಿಸಿದ ಪತ್ರವನ್ನು ಸದನದ ಗಮನಕ್ಕೆ ತರುತ್ತೇನೆ.

(ಲಿಖಿತ ಪತ್ರವನ್ನು ಸನ್ಮಾನ್ಯ ಅಧ್ಯಕ್ಷರು ಓದಿದರು)

ಪ್ರಕಟಣೆ

ಶ್ರೀ ಬಿ. ಶಿವಣ್ಣ — ಸಮಾಜ ಕಲ್ಯಾಣ ಮಂತ್ರಿಗಳು, ಇವರ ಪತ್ರ.

ಮಾನ್ಯ ಅಧ್ಯಕ್ಷರೆ.

ನಾನು ದಿನಾಂಕ ೧೯-೬-೯೦ರಿಂದ ೧೪-೭-೯೦ರವರೆಗೆ ಸರ್ಕಾರಿ ಕೆಲಸದ ನಿಮಿತ್ತ ವಿದೇಶಿ ಪ್ರವಾಸ ಕೈಗೊಳ್ಳಲಿದ್ದೇನೆ. ನನ್ನ ಖಾತೆಗೆ ಸಂಬಂಧಪಟ್ಟ ವಿಷಯಗಳನ್ನು ಹಾಗೂ ಪ್ರಶ್ನೆಗಳನ್ನು ವಿಧಾನ ಸಭೆಯಲ್ಲಿ ಪ್ರಸ್ತಾಪಿಸಲ್ಪಡುವ ಎಲ್ಲಾ ವಿಷಯಗಳನ್ನು ಶ್ರೀ ಎಂ. ವೀರಪ್ಪ ಮೊಯಿಲಿ, ಯೋಜನೆ ಕಾನೂನು, ಸಂಸದೀಯ ವ್ಯವಹಾರಗಳು ಹಾಗು ಪ್ರವಾಸೋದ್ಯಮ ಸಚಿವರು ನನ್ನ ಗೈರುಹಾಜರಿಯಲ್ಲಿ ನೋಡಿಕೊಳ್ಳುವರು ಮತ್ತು ಉತ್ತರಿಸುವರು. ಈಗ ಐದುಕಾಲು ಗಂಟೆಯಾಗಿದೆ. ಇಂದಿನ ಕಲಾಪಗಳನ್ನು ಮುಗಿಸೋಣವೇ ಅಥವಾ ಬೇರೆ ಕಲಾಪಗಳನ್ನು ತೆಗೆದುಕೊಳ್ಳೋಣವೆ?

ಶ್ರೀ ಕೆ. ಹೆಚ್. ಪಾಟೀಲ್. - ಬೇಡಿಕೆಯನ್ನು ಮಂಡಿಸಿ ಚರ್ಚೆ ಪ್ರಾರಂಭ ಮಾಡೋಣ.

ಅಧ್ಯಕ್ಷರು.—ಮಂಡನೆ ಆದಮೇಲೆ there cannot be a vaccum, Somebody should take over the floor.

ಶ್ರೀ ಕೆ. ಹೆಚ್. ರಂಗನಾಥ್.—ಮಂಡಿಸಿದ ಮೇಲೆ ವಿರೋಧ ಪಕ್ಷದವರು ಒಬ್ಬಿಬ್ಬರು ಮಾತನಾಡಲಿ. ಇಲ್ಲದೇ ಹೋದರೆ ಆಫೊಷ್ಟಿನ ಕಾರ್ಯಕಲಾಪಗಳ ಪಟ್ಟಿಯಲ್ಲಿ ನಾವು ಪೂರ್ಣ ಕೆಲಸ ಮಾಡಿದ ಹಾಗೆ ಆಗುವುದಿಲ್ಲ. ಮಾನ್ಯ ಸಚಿವರು ಮಂಡನೆ ಮಾಡಿದ ಮೇಲೆ ಒಂದು ಗಂಟೆಯ ಕಾಲ ಚರ್ಚೆ ಮಾಡಬಹುದು ಎಂದು ನನ್ನ ಅಭಿಪ್ರಾಯ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಕಾರ್ಮಿಕ ಇಲಾಖೆಯ ಬಗ್ಗೆ ಚರ್ಚೆಯನ್ನು ನಾನು ಪ್ರಾರಂಭ ಮಾಡುವುದು. ಈಗ ಸಮಯ ಆಗಿದೆ. ಮಾನ್ಯ ಸಚಿವರು ಮಂಡನೆ ಮಾಡಲಿ ಚರ್ಚೆಯನ್ನು ನಾಳೆ ಪ್ರಾರಂಭ ಮಾಡೋಣ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ —ಬೇರೆ ವಿಷಯಗಳು ಇಲ್ಲದಿದ್ದರೆ, ಸಮಯಾವಕಾಶ ಇದ್ದರೆ ನಾನು ನಿಯಮ ೬೮ರ ಕೆಳಗೆ ಒಂದು ವಿಷಯವನ್ನು ಪ್ರಸ್ತಾಪಿಸಲು ಕೊಟ್ಟಿದ್ದೇನೆ. ನನಗೆ ಅವಕಾಶ ಕೊಡಿ.

ಅಧ್ಯಕ್ಷರು.—ನಾಳೆ ಅದರ ಬಗ್ಗೆ ರೂಲಿಂಗ್ ಕೊಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಾನು ಏನೋ ರೆಡಿ ಇದ್ದೇನೆ. ದಯವಿಟ್ಟು ತಾವು ಅವಕಾಶ ಮಾಡಿಕೊಟ್ಟರೆ ಒಳ್ಳೆಯದು,

ಅಧ್ಯಕ್ಷರು.—ಈಗ ಬೇಡಿಕೆಗಳು.